# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1387
2) ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3) ಉತ್ತರಿಸುವ ದಿನಾಂಕ : 18-03-2020
4) ಉತ್ತರಿಸಬೇಕಾದ ಸಚಿವರು : ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮತ್ಸ್ಯ ಉಪಹಾರ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸ ಲಾಗಿದೆಯೇ; | ರಾಜ್ಯದಲ್ಲಿ ನಬಾರ್ಡ್ ಸಹಯೋಗದೊಂದಿಗೆ ಆರ್‌ಐಡಿಎಫ್ ಯೋಜನೆಯಡಿ ಒಟ್ಟು ರೂ15.00 ಕೋಟಿ ವೆಚ್ಚದಲ್ಲಿ 12 ಕೇಂದ್ರಗಳಲ್ಲಿ ಮತ್ಸ್ಯದರ್ಶಿನಿ ಮೀನು ಉಪಾಹಾರ ಗೃಹಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿದ್ದು, ಈ ಬಗ್ಗೆ ಪರಿಶೀಲಿಸಲಾಗುತ್ತಿದೆ. |
| ಆ) | ಸದರಿ ಉಪಹಾರ ಕೇಂದ್ರಗಳ ಯೋಜನೆಯ ರೂಪುರೇಷೆಗಳೇನು ಹಾಗೂ ಇದಕ್ಕೆ ತಗಲುವ ಅಂದಾಜು ಮೊತ್ತವೆಷ್ಟು; (ವಿವರ ನೀಡುವುದು) | ನಿಗಮದ ಮತ್ಸ್ಯದರ್ಶಿನಿಗಳಲ್ಲಿ ತಾಜಾ ಮೀನು ಮಾರಾಟ, ಮೀನಿನ ಮೌಲ್ಯವರ್ಧಿತ ಉತ್ಪನ್ನಗಳ ಮಾರಾಟ, ಮೀನು ಉಪಾಹಾರ ಗೃಹ, ಅಲಂಕಾರಿಕಾ ಮೀನುಗಳು ಮತ್ತು ಇದಕ್ಕೆ ಸಂಬಂಧಿಸಿದ ಪೂರಕ ಸಾಮಾಗ್ರಿಗಳ ಮಾರಾಟ ಮಾಡಿ ಗ್ರಾಹಕರಿಗೆ ಒಂದೇ ಸೂರಿನಡಿ ವಿವಿಧ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಲಾಗಿದೆ. ನಿಗಮದ ಎಲ್ಲಾ ಮತ್ಸ್ಯದರ್ಶಿನಿಗಳನ್ನು ಏಕ ರೂಪದ ವಿನ್ಯಾಸದಡಿ ನಿರ್ಮಿಸಲು ಉದ್ದೇಶಿಸಲಾಗಿದೆ. ಪ್ರತಿ ಮತ್ಸ್ಯದರ್ಶಿನಿಯ ಅಂದಾಜು ವೆಚ್ಚ ಸುಮಾರು ರೂ.1.25 ಕೋಟಿಗಳಾಗಿರುತ್ತದೆ. |
| ಇ) | ಯಾವ ಕಾಲಮಿತಿಯಲ್ಲಿ ಉಪಹಾರ ಕೇಂದ್ರಗಳನ್ನು ಯಾವ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು? | ನಬಾರ್ಡ್ ನಿಂದ ಮಂಜೂರಾತಿ ದೊರೆತನಂತರ ಈ ಕೆಳಕಂಡ ನಗರಗಳಲ್ಲಿ ನಿಗಮದಿಂದ ಮತ್ಸ್ಯದರ್ಶಿನಿ ಮಳಿಗೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.<br>ಮಂಗಳೂರು, ಕುಂದಾಪುರ, ಉಡುಪಿ, ಮೈಸೂರು, ಕಲ್ಬುರ್ಗಿ, ಬೆಳಗಾಂ, ಹಾಸನ, ಹುಬ್ಬಳ್ಳಿ/ಧಾರವಾಡ, ವಿಜಯಪುರ, ತುಮಕೂರು, ಶಿವಮೊಗ್ಗ, ಮತ್ತು ರಾಯಚೂರು. |

ಸಂಖ್ಯೆ: ಪಸಂಮೀ ಇ-77 ಮೀಇಯೋ 2020

(ಕೋಟ ಶ್ರೀನಿವಾಸ ಪೂಜಾರಿ)
ಮುಜರಾಯಿ, ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು